# ಅಧ್ಯಾಯ 18

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



| ಛಂದ | ಸಂತಸಂಗದ ಮಹಿಮೆಯಿಂದಲೆ ವ್ಯಾಘ್ರ ನರನಾಗಿರುವನು! ಅಂತೆ ಎನ್ನನು ಸದ್ಗುರುವು ಪರಮಾರ್ಥ ಮಾರ್ಗಕೆ ತರುವನು| ಧೈರ್ಯದಿಂದ ನಿನ್ನ ಕರುಣೆಯ ದಾರಿ ನೋಡುತ ಇರುವೆನು | ಶೌರ್ಯದಿಂದೀ ಷಡ್ರಿಪುಗಳನ್ನು ಹೋರಿ ಚರಣಕ್ಕೆ ಬರುವೆನು..

ನೀನು ಅನಾದ್ಯನಂತನು ಅವಿನಾಶಿಯು, ಸ್ವಸತ್ತೆಯಿಂದ ಈ ಜಗವನ್ನು ನಡಿಸುವಿ. ಮಾಯಾ ಆಟವನ್ನು ಕ್ಷಣಹೊತ್ತು ತೋರಿಸಿ ಕೂಡಲೇ ನಿನ್ನೊಳಗೆ ಗ್ರಹಣ ಮಾಡಿಕೊಳ್ಳುವಿ. ನೀನು ಸ್ವಾನಂದದಿಂದ ಆಟ ಆಡುತ್ತಿರುವಾಗ, ಸುಖದುಃಖಗಳನ್ನು ನಮ್ಮ ಮೇಲೆ ಇಡುವಿ. ಅಜ್ಞಾನಿಗಳಾದ ನಾವಾದರೂ ನಿನ್ನನ್ನು ತಿಳಿಯಲಾರದೇ ಸಂಸಾರ ವ್ಯಥೆಯನ್ನು ಭೋಗಿಸುತ್ತಿರುವೆವು. ಅನೇಕ ಜನ್ಮ ಪರ್ಯಂತ ಸಂಸಾರವನ್ನು ಭೋಗಿಸಿ, ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ತಿರುತಿರುಗಿ ಕಟ್ಟಕಡೆಗೆ ಈ ಮನುಷ್ಯ ಜನ್ಮಕ್ಕೆ ಬಂದು, ಏನು ಸಾರ್ಥಕ ಮಾಡಿದೆನೆಂದು ನನಗೆ ತಿಳಿಯದು. ಎಲ್ಲಿ ಪರ್ಯಂತ ನಿನ್ನ ಪಾದಗಳು ಲಭಿಸಲಿಲ್ಲ, ಅಲ್ಲಿ ತನಕ ಸಂಸಾರ ಭಯವು ನಾಶವಾಗದು. ಇತರ ಉಪಾಯಗಳನ್ನು ಸಾಧಿಸಿ ಏನು ಮಾಡೋಣ. ಅವೆಲ್ಲಾ ವ್ಯರ್ಥವೇ ಸರಿ. ಹೇ ಸಿದ್ಧರಾಯನೇ, ನಿನ್ನ ಕೃಪಾಬಲದಿಂದ ಅನೇಕ ಪ್ರಾಣಿಗಳು ಸಂಸಾರದಿಂದ ತಾರಣ ಹೊಂದಿದವು. ನಿನ್ನ ಪವಿತ್ರವಾದ ಸಂಗತಿಯ ಹೊರತು ಉದ್ಧಾರ ಹೊಂದಲಿಕ್ಕೆ ಇತರ ಉಪಾಯವೇ ಇಲ್ಲ.

ನಾನು ನನ್ನ ಪ್ರಾರಬ್ಧವನ್ನು ಅರಿಯಲಾರೆ, ಏನಿರುವದೋ ಅದೆಲ್ಲಾ ನಿನ್ನದಿರುವದೆಂದು ನಾನು ತಿಳಿದಿರುತ್ತೇನೆ. ನಾನು ನನ್ನದು ಎಂಬ ಈ ಭಾರವನ್ನು ಇಳಿಸಿ, ಹೇ ಸದ್ಗುರುವೇ, ನನಗೆ ಆನಂದವನ್ನು ಪ್ರಾಪ್ತಿಮಾಡಿ ಕೊಡಿಸುವಂಥವನಾಗು. ನೀನು ದಯಾಳು ಇದ್ದೀ ಸರ್ವಜ್ಞನಿದ್ದಿ, ಈ ಪ್ರಕಾರ ತಿಳಿದು ನನಗೆ ಮನಸ್ಸಿನಲ್ಲಿ ಭಯವಿಲ್ಲ. ನನ್ನ ಅಂತರವನ್ನು ನೀನು ತಿಳಿದು ನೋಡಿ, ಏನು ಮಾಡತಕ್ಕದ್ದೊ ಅದನ್ನೇ ಮಾಡು. ನನ್ನ ಕರ್ತವ್ಯವೆಲ್ಲವೂ ನಿನ್ನ ಸಲುವಾಗಿಯೇ ಇರುವದು. ನಿನ್ನ ಪಾದದಲ್ಲಿ ನನ್ನ ಸ್ವಹಿತವನ್ನು ಇಟ್ಟು ನಾನು ಪಾರಾಗುವೆನು. ನೀನು ಅನಾಥರಿಗೆ ನಾಥನಿದ್ದಿ, ಅನೇಕ ಸಂಕಷ್ಟಗಳಿಂದ ಬಿಡಿಸುವಿ, ಶರಣಾಗತರನ್ನು ನೀನು ನಿಶ್ಚಯವಾಗಿ ಸ್ವತಃ ಸಂಭಾಳಿಸವಿ. ಈ ಪ್ರಕಾರದ ನಿನ್ನ ಕೀರ್ತಿಯನ್ನು ಭಕ್ತಜನರೊಳಗೆ ನಾನು ಬಹಳ ಕೇಳಿದ್ದೇನೆ, ಏನೆಂದರೆ - ಏನೇನೂ ಪ್ರಯತ್ನಗಳನ್ನು ಮಾಡದಿದ್ದರೂ ನೀನು ಭಕ್ತರನ್ನು ಭವದೊಳಗಿಂದ ತಾರಿಸುವಿ.

ಹೇ ಶ್ರೋತಾ  ಜನರುಗಳಿರಾ, ಕಥೆಯನ್ನು  ಶ್ರವಣ ಮಾಡುವಂಥವರಾಗಿರಿ, ಸದ್ಗುರು ಸಿದ್ಧರ ದಯಾರಸಕ್ಕೆ ಪಶ್ವಾದಿಗಳು ಸಹಾ ಪಾತ್ರರಾಗುತ್ತಿರುವಾಗ, ನರರಿಗೆ ಏನು ಭೀತಿ ಇರುವದು ? ಪೂರ್ವಾರ್ಧ ಚರಿತ್ರೆಯೊಳಗೆ ಹೇಳಿರುವದೇನೆಂದರೆ ಸಿದ್ಧರು ನಿತ್ಯ ಭೀಮಪ್ಪನ  ಮನೆಗೆ ಹೋಗಿ, ರಾತ್ರಿ ಅಲ್ಲಿಯೇ ಉಳಿದು, ಬೆಳಿಗ್ಗೆ ಮಠಕ್ಕೆ ಬರುತ್ತಿದ್ದರು. ಭೀಮಪ್ಪನಿಗೆ ಸಿದ್ದಪ್ಪನೆಂಬ ದತ್ತ ಪುತ್ರನಿರುವನು. ಅವನ ಮಗುವಿಗೆ ಗುರಪ್ಪನೆಂಬ ಹೆಸರು. ಆ ನಿಷ್ಪಾಪನಾದ ಗುರಪ್ಪನನ್ನು  ಸಿದ್ದರು ಯಾವಾಗಲೂ ತಮ್ಮ ತೊಡೆಯ ಮೇಲೆ ಕೂಡ್ರಿಸಿಕೊಂಡು, ಆಡಿಸುತ್ತಿದ್ದರು. ಗುರಪ್ಪನು  ಚಿಕ್ಕವನಿರುವಾಗ ಅವನ ತಾಯಿಯು ಶಿವಾಧೀನಳಾದಳು. ಆ ಮೇಲೆ ಆತನು  ಸರ್ವಕಾಲ ಸದ್ಗುರುಗಳ ಚರಣಗಳ ಮೇಲೆ ಆಡುತ್ತಿದ್ದನು. ಆಗಾಗ ಸ್ವಾಮೀಜೀವರ ಮೈಮೇಲೆ ಹತ್ತಿ, ಗುರಪ್ಪನು ಸುಖದಿಂದ ಆಟವಾಡುತ್ತಿದ್ದನು. ತನಗೆ ಎಷ್ಟು  ತೊಂದರೆಯಾಗುತ್ತಿದ್ದರೂ ಸದ್ಗುರುಗಳು ಅವನಿಗೆ ಬೇಡ ಅನ್ನುತ್ತಿರಲಿಲ್ಲ, ಮತ್ತು ಅವನು

ತುಳಿಯುವದನ್ನು ಆನಂದದಿಂದ ಸಹಿಸುತ್ತಿದ್ದರು.

ಒಂದಾನೊಂದು ದಿವಸ ಕೆಲವು ಭಕ್ತರು ಬಂದು, ಸಿದ್ಧರಿಗೆ ಅಂದದ್ದೇನೆಂದರೆ - "ಗುರಪ್ಪನು ನಿಮಗೆ ಬಹಳ ಉಪದ್ರವ ಕೊಡುತ್ತಾನೆ. ಅವನನ್ನು ಒಯ್ದು, ಸ್ತ್ರೀಯರ ಕಡೆ ಕೊಟ್ಟು ಬರುತ್ತೇವೆ" ಆಗ ಅವರನ್ನು ಕುರಿತು ಸಿದ್ಧರಂದರು - "ಈ ಹುಡುಗನಿಗೆ ಇದು ಸಹಜ ಸ್ವಭಾವವಾಗಿರುತ್ತದೆ. ಯಾಕೆಂದರೆ, ಪೂರ್ವ ಜನ್ಮದಲ್ಲಿ ಇವನು ಹುಲಿಯಾಗಿದ್ದನು. ಆ ಸಮಯದಲ್ಲಿ ನಾನು ಅವನನ್ನು ಬಹಳ ಪೀಡಿಸಿದ್ದೆನು. ತಾನು ಎರಡನೇಯವರಿಗೆ ಪೀಡಿಸಿದೆನೆಂದರೆ, ಉತ್ತರ ಜನ್ಮದಲ್ಲಿ ಅವರಿಂದ ಆ ಪೀಡೆಯನ್ನು ತಾನು ಭೋಗಿಸಲೇಬೇಕಾಗುತ್ತದೆ. ಆದ್ದರಿಂದ ಯಾರೊಬ್ಬರಿಗೂ ಪಿಡಿಸದೆ ಈ ಲೋಕದಲ್ಲಿ ಸರ್ವದಾ ವರ್ತಿಸುತ್ತಿರಬೇಕು. ಇತರರಿಗೆ ಏನಾದರೂ ದುಃಖ ಕೊಟ್ಟಿದ್ದಾದರೆ ಅದರ ಫಲವನ್ನು ಅನುಭವಿಸುವುದು ಎಂದು ತಪ್ಪುವುದಿಲ್ಲ. ಆತ್ಮಜ್ಞಾನ ಹೊಂದಿದವನಿಗೆ ಮಾತ್ರ ತಪ್ಪಿಸುವುದು". ಹೇಗೆ ಸಿದ್ಧಾರೂಢರಂದದ್ದು ಕೇಳಿ, ಆ ಸರ್ವ ಭಕ್ತರನ್ನುತ್ತಾರೆ - "ಹೇ ದಯಾನಿಧಿಯೇ, ಆ ಅಪೂರ್ವವಾದ

ಕಥೆಯನ್ನು ಕೇಳಲಿಚ್ಛಿಸುತ್ತೇವೆ. ನಮ್ಮ ಮೇಲೆ ಕೃಪಾ ಮಾಡಿ ಅದನ್ನು ಹೇಳಬೇಕೆಂದು ಪ್ರಾರ್ಥಿಸುತ್ತೇವೆ. ನಿನ್ನ ಚರಿತ್ರವು ಪರಮಪಾವನವಾಗಿರುತ್ತದೆ. ಯಾವದರ ಶ್ರವಣ ಮಾತ್ರದಿಂದ ನಮ್ಮ ಕರ್ಣಗಳು ಪವಿತ್ರವಾಗಿ ನಾವು ಧನ್ಯರಾಗುವೆವೋ, ಅಂಥಾ ಈ ಕಥೆಯನ್ನು ದಯವಿಟ್ಟು ನಮಗೋಸ್ಕರವಾಗಿ ನಿವೇದಿಸಬೇಕು". ಆಗ್ಗೆ ಸಿದ್ಧರಾದರು - "ನೋಡಿರಿ, ಅಲ್ಲಿ ರಸ್ತೆಯ ಮೇಲೆ ಒಬ್ಬ ಹುಡುಗನು ಆಡುತ್ತಾನೆ. ಅವನನ್ನು ಇತ್ತ ಕರೆದುಕೊಂಡು ಬನ್ನಿರಿ", ಎಂದ ಕೂಡಲೇ, ಆ ಭಕ್ತರು ಹೋಗಿ, ರಸ್ತೆಯ ಮೇಲೆ ಆಡುತ್ತಾ ಇರುವ ಆ ಸಣ್ಣ ಹುಡುಗನನ್ನು ಒಳಗೆ ಕರೆದುಕೊಂಡು ಬಂದು, ಸಿದ್ಧರ ಚರಣಗಳ ಮೇಲೆ ಹಾಕಿದರು. ಸದ್ಗುರುಗಳು ಆತನನ್ನು ಎತ್ತಿ ಅವನಿಗೆ ಒಂದು ಬಾಳೆಹಣ್ಣು ತಿನ್ನಲು ಕೊಟ್ಟ ಸಮೀಪದಲ್ಲಿ ಕುಳಿತು ತಿನ್ನಲಿಕ್ಕೆ ಹೇಳಿದರು. ಆತನು ಹಾಗೆಯೇ ಮಾಡಿದನು. ಬಾಳೆಹಣ್ಣನ್ನು ಆ ಹುಡುಗ ತಿಂದ ಕೂಡಲೇ, ಅವನ ಮುಖದ ಮೇಲೆ ಒಂದು ಪ್ರಕಾರದ ತೇಜವು ಕಂಡುಬಂತು. ಇದನ್ನು ನೋಡಿದ ಭಕ್ತರೆಲ್ಲರು ಬಹು ಆಶ್ಚರ್ಯವನ್ನು ಹೊಂದುವಂಥವರಾದರು. ಆಗ ಆ ಭಕ್ತರನ್ನು

ಕುರಿತು ಸಿದ್ದರಾಯರಂದರು - “ಭಕ್ತಜನರೇ, ಈಗ ಈ ಹುಡುಗನಿಗೆ ಪೂರ್ವ ಕಥೆಯನ್ನು ಹೇಳೆಂದು ಕೇಳಿರಿ. ಅವನು ಆ ಸರ್ವ ಕಥೆಯನ್ನು ಹೇಳುವನು". ಆಗ ಆ ಭಕ್ತರು ಆ ಹುಡುಗನನ್ನು ಕುರಿತು ಪ್ರಶ್ನೆ ಮಾಡುವಂಥವರಾದರು - “ಎಲೈ ತಮ್ಮಾ, ಪೂರ್ವದಲ್ಲಿ ಶ್ರೀ ಸಿದ್ಧಾರೂಢರು ವ್ಯಾಘ್ರದ ಕೂಡ ಆಡಿದ ಆ ಕಥೆಯು ನಿನಗೆ ಗೊತ್ತಿದ್ದರೆ ನಮಗೋಸ್ಕರವಾಗಿ ಹೇಳುವಂಥವನಾಗು". ಈ ವಚನವನ್ನು ಕೇಳಿ ಆ ಬಾಲಕನ ಅನ್ನುತ್ತಾನೆ:

"ಹೇ, ಸದ್ಭಕ್ತರುಗಳಿರಾ, ಕೇಳುವಂಥವರಾಗಿರಿ, ಈಗ ಸುಮಾರು ಮೂವತ್ತು ವರ್ಷಗಳಾದವು, ಸಿದ್ಧಾರೂಢರು ಪೃಥ್ವಿ ಸಂಚರಣ ಮಾಡುತ್ತಾ, ಕಾವೇರಿ ನದಿ ತೀರಕ್ಕೆ ಬಂದರು. ಅಲ್ಲಿ ಮಹಾ ಅರಣ್ಯವು ಹಬ್ಬಿತ್ತು. ಆದರೆ ನದೀ ದಂಡೆಯಲ್ಲಿ ಉಸುಬಿನ ಪ್ರದೇಶದಲ್ಲಿ ಅನೇಕ ಕುರಿ ಕಾಯುವ ಹುಡುಗರು, ಕುರಿಗಳನ್ನು ಮೇಯಲಿಕ್ಕೆ ಬಿಟ್ಟು ಆಡುತ್ತಿದ್ದರು. ಆಗ್ಗೆ ಸಿದ್ದರು ಅವರ ಸಮೀಪ ಹೋಗಿ ನಿಂತಿದ್ದನ್ನು ಆ ಹುಡುಗರು ಕಂಡು, ಇವರನ್ನು ತಮ್ಮ ಕೂಡ ಆಡಲಿಕ್ಕೆ ಕರೆದರು. ಸ್ವಲ್ಪ ಹೊತ್ತು

ಎಲ್ಲರೂ ಕೂಡಿ ಆಡಿದಮೇಲೆ, ಅವರಿಗೆ ಶ್ರಮವಾಗಿ ಹಸಿವೆ ಆಯಿತು. ಆಗ, ತಾವು ತಂದ ಬುತ್ತಿಗಳನ್ನು ಬಿಚ್ಚಿ ಎಲ್ಲರೂ ಒತ್ತಟ್ಟಿಗೆ ಕುಳಿತರು. ಮತ್ತು ಸಿದ್ಧರಿಗೂ ಅವರ ಕೂಡ ಊಟಕ್ಕೆ ಕರೆದರು. ಎಲ್ಲರೂ ಆನಂದದಿಂದ ಉಣ್ಣುವಂಥವರಾದರು. ಕುರಿಗಳು ಸಾವಕಾಶ ಮೇಯುತ್ತಿರುವಾಗ, ಒಮ್ಮೆಂದೊಮ್ಮೆ ಗಟ್ಟಿಯಾಗಿ ಕೂಗುತ್ತ ಅತ್ತಿತ್ತ ಓಡುತ್ತಿದ್ದವು. ಇದನ್ನು ನೋಡಿ, ಆ ಕುರಿ ಕಾಯುವ ಹುಡುಗರು ಗಾಬರಿಯಾಗಿ ತಾವು ಮಾಡುತ್ತಿದ್ದ ಊಟವನ್ನು ಅಲ್ಲೆ ಬಿಟ್ಟು, ಓಡುತ್ತಿದ್ದ ಕುರಿಗಳನ್ನು ಬೆನ್ನು ಹತ್ತಿದರು. ಕುರಿಗಳು ಯಾಕೆ ಓಡಿದವು ಎಂತ ಯಾರಿಗೂ ಗೊತ್ತಾಗದೆ ಎಲ್ಲರೂ ಓಡತೊಡಗಿದರು. ಆ ಕುರುಬರ ಕೂಡ ಸಿದ್ಧರೂ ಎದ್ದು, ಭಯದ ಕಾರಣವನ್ನು ತತ್ಕಾಲ ತಿಳಿದುಕೊಂಡರು. ಒಂದು ವ್ಯಾಘ್ರವು ಸಮೀಪದ ಒಂದು ಕಂಟಿಯೊಳಗೆ ಕುಳಿತುಕೊಂಡಿತ್ತು. ಆಗ ಮಹಾತ್ಮರು ಕಂಟಿಯ ಸಮೀಪ ಬಂದು,ಏನು ಕೆಲಸ ಮಾಡಿದರು ಎಂಬುದನ್ನು ಸಾವಧಾನ ಚಿತ್ತದಿಂದ ಕೇಳುವಂಥವರಾಗಿರಿ. ಒಂದು ಕುರಿಯನ್ನು ಎತ್ತಿಕೊಂಡು ಹೋಗಬೇಕೆಂದು, ಜಪ್ಪಿಸಿ

ಕೂತಿರುವಾಗ, ಆ ಹುಲಿಯ ಹಿಂದಿನಿಂದಲೇ ಸಿದ್ಧರು ಸಾವಕಾಶ ಬಂದು, ಅಕಸ್ಮಾತ್ತಾಗಿ ಅದರ ಬೆನ್ನ ಮೇಲೆ ಥಪ್ಪರಿಸಿದರು. ಕೂಡಲೆ ಹುಲಿಯು ಗಾಬರಿಯಾಗಿ ಒಮ್ಮೆಂದೊಮ್ಮೆಲೆ ಹಾರಿತು. ಆದರೆ ಸಿದ್ದರು ಅದರ ಬೆನ್ನು ಹತ್ತಿ ಹೋಗಿ, ಅದರ ಕಿವಿಯನ್ನು ಗಟ್ಟಿಯಾಗಿ ಹಿಡಿಯಲು, ಅದರ ಶಕ್ತಿಪಾತವಾಗಿ ಸುಮ್ಮನೆ ನಿಂತಿತು. ಆಗ ಸಿದ್ದರು ಅದರ ಬೆನ್ನ ಮೇಲೆ ಹತ್ತಿ, ಆ ಕುರಿಕಾಯುವ ಹುಡುಗರಿಗೆ ಕೂಗಿ, ಇತ್ತ ಬನ್ನಿರೆಂದು ಕರೆದರು. ಇದನ್ನು ನೋಡಿ ಆ ಹುಡುಗರು ಓಡುವದನ್ನು ಬಿಟ್ಟು ನಿಂತರು. ಸಿದ್ಧರ ಸಣ್ಣ ಮೂರ್ತಿಯು ಆ ಮಹಾವ್ಯಘ್ರದ ಬೆನ್ನ ಮೇಲೆ ಕೂತಿದ್ದು ನೋಡಿ, ಅವರು ಆಶ್ಚರ್ಯಚಕಿತರಾದರು. ಆದರೆ ಮನಸ್ಸಿನೊಳಗೆ ಹುಲಿಯ ಭಯವಿತ್ತು. ಆಗ ಮಹಾತ್ಮರು ಆ ಹುಡುಗರು ನಿಂತಲ್ಲಿ ಹೋಗುವಂತೆ ಆ ಹುಲಿಯನ್ನು ಪ್ರೇರಿಸುವಂಥವರಾದರು. ತಮ್ಮ ಕಡೆಗೆ ಹುಲಿ ಬರುವದನ್ನು ನೋಡಿ, ಆ ಹುಡುಗರು ಓಡಲಿಕ್ಕೆ ಆರಂಭಿಸುವಾಗ, ಸಿದ್ದರನ್ನು ತ್ತಾರೆ -“ಎಲೇ ಹುಡುಗರೀರಾ ನೀವು ಹೆದರಬೇಡಿರಿ. ಹೆದರಬೇಡಿರಿ. ನಿಮಗೆ

ಆಡಿಸಲಿಕ್ಕೆ ಇದೊಂದು ಪಶುವನ್ನು ತಂದಿರುವೆನು, ಇದು ಬಹು ಸಾಧುವಾಗಿರುವ ಪ್ರಾಣಿಯು, ನಿಮಗೇನು ಹಾನಿ ಮಾಡುವುದಿಲ್ಲ", ಹುಡುಗರು ಅನ್ನುತ್ತಾರೆ - "ಎಲೈ ಸಿದ್ಧನೇ ನೀನು ಮಹಾ ಪುರುಷನಿದ್ದಂತೆ ಕಾಣಿಸುತ್ತಿ. ನಿನ್ನ ಕಡೆ ವಶ್ಯಾದಿ ಸಿದ್ಧಿಗಳಿರುವವು. ಆದರೆ ನಮಗೆ ಆ ಶಕ್ತಿ ಇಲ್ಲ. ಸ್ವಾಭಾವಿಕವಾಗಿ ಹುಲಿಯು ಹಿಂಸ ಪ್ರಾಣಿಯು, ಅದು ನಮ್ಮ ಮೇಲೆ ಅದರ ಸ್ವಭಾವವನ್ನು ತೋರಿಸುವುದು, ನಿನ್ನ ಮಾತಿನ ಮೇಲೆ ನಮಗೇನೂ ವಿಶ್ವಾಸವಾಗದು, ಮನಸ್ಸಿನಲ್ಲಿ ಬಹಳ ಭಯವಾಗುತ್ತದೆ'; ಆಗ ಮಹಾತ್ಮರು ಏನು ಮಾಡಿದರೆಂದರೆ - ಒಬ್ಬ ಹುಡುಗನನ್ನು ಬಲಾತ್ಕಾರದಿಂದ ಹಿಡಿದು, ಆ ಹುಲಿಯ ಬೆನ್ನಮೇಲೆ ಕೂಡ್ರಿಸಿದರು. ಆಗ ಎಲ್ಲಾ ಹುಡುಗರು ನೋಡುತ್ತಿದ್ದರು. ಹುಲಿಯಾದರೂ ಮೋರೆ ಕೆಳಗೆ ಮಾಡಿ ಸ್ವಸ್ಥವಾಗಿ ನಿಲ್ಲುವಂಥಾದ್ದಾಯಿತು. ಕೆಲವು ಹೊತ್ತಿನವರೆಗೆ ಹುಡುಗರು ನೋಡಿದ ಮೇಲೆ ಅವರಿಗೆ ಧೈರ್ಯವಾಯಿತು. ಆಮೇಲೆ ಅವರು ಸಂತೋಷದಿಂದ ಆ ಹುಲಿಯ ಹತ್ತಿರ ಬಂದು ಎಲ್ಲಾ ಭೀತಿಯನ್ನು ಬಿಟ್ಟು, ಅದರ ಕೂಡ ನಾನಾ ಪ್ರಕಾರ

ಆಡುವಂಥವರಾದರು. ಪ್ರತಿದಿನವೂ ಹುಡುಗರು ಕುರಿಗಳನ್ನು ಮೇಯಿಸಲಿಕ್ಕೆ ಕರಕೊಂಡು ಬಂದಾಗ್ಗೆ, ಹುಲಿಯಾದರೂ ಅಡವಿಯೊಳಗಿಂದ ಅವರ ಕೂಡ ಆಡಲಿಕ್ಕೆ ಬರುತ್ತಿತ್ತು. ಸಿದ್ದರು ನಿತ್ಯ ಹುಲಿಯ ಮೇಲೆ ಕೂತಿರುವಾಗ್ಗೆ, ಹುಡುಗರು ಅದನ್ನು ಹೊಡೆಯುತ್ತಿದ್ದರು. ಸಿದ್ಧರಿಗೆ ಅದರ ಮೇಲೆ ಬಹುಪ್ರೀತಿಯುಂಟಾಗಿ ಆಗಾಗ್ಗೆ ಅದರ ಮುಖವನ್ನು ಮಮತೆಯಿಂದ ಹಿಡಿದು ಕೈಯ್ಯಾಡಿಸುತ್ತಿದ್ದರು. ಹೀಗಿರುತ್ತಾ ಒಂದಾನೊಂದು ದಿವಸ ಒಬ್ಬ ಬೇಟೆಗಾರರು ಈ ವರ್ತಮಾನವನ್ನು ಕೇಳಿ, ಆ ಹುಲಿಯನ್ನು ಕೊಲ್ಲುವ ಉಪಾಯವನ್ನು ಚಿಂತಿಸುವವನಾದನು ಅಪ್ರಯಾಸದಿಂದ ಹುಲಿಯು ಸಿಗುತ್ತಿರುವಾಗ ಅಡಗಿ ದಾರಿಯೊಳಗೆ ಕುಳಿತುಕೊಂಡು ಅದನ್ನು ಕೊಲ್ಲಬೇಕು. ಅದರ ಚರ್ಮವನ್ನು ಸರಕಾರದವರಿಗೆ ಕೊಟ್ಟರೆ ಬಹಳ ಇನಾಮು ಸಿಗುವುದು. ಹೀಗಂದು ಒಂದು ದಿನ ತುಪಾಕಿ ತಕ್ಕೊಂಡು ಬಂದು, ಆ ಹುಲಿ ಬರುವ ದಾರಿಯಲ್ಲಿ ಒಂದು ಕಂಟಿಯಲ್ಲಿ ತುಪಾಕಿ ಬಾರು ಮಾಡಿ ಅವಿತುಕೊಂಡು ಕುಳಿತನು. ಅದೇ ಸಮಯದಲ್ಲಿ ಹುಡುಗರು

ಕುರಿಗಳನ್ನು ತೆಗೆದುಕೊಂಡು ಬಂದರು. ಸಿದ್ಧಾರೂಢರೂ ಅವರು ಕೂಡ ಇದ್ದರು. ಹುಡುಗರು ನಿತ್ಯದಂತೆ ಕುರಿಗಳನ್ನು ಮೇಯಲಿಕ್ಕೆ ಬಿಟ್ಟು, ಉಸಬಿನ ಮೇಲೆ ಆಡಲಾರಂಭಭಿಸಿದರು. ಆಡುತ್ತಿರುವ ಆ ಹುಡುಗರನ್ನು ನೋಡಿ, ಆ ಹುಲಿಯು ಆನಂದದಿಂದ ಸಿದ್ದರ ಕಡೆ ನೋಡುತ್ತಾ ನಿಃಶಂಕ ಚಿತ್ತದಿಂದ ಅಡವಿಯೊಳಗಿಂದ ಬರುತ್ತಿತ್ತು. ಆ ಶಿಕಾರಿಯವನಾದರೂ, ವ್ಯಾಘ್ರವು ಮುಂದೆ ನೋಡುತ್ತಾ ಹೋಗುತ್ತಿರುವಾಗ, ತನಗೆ ಸಮೀಪಿಸಿದ ಕೂಡಲೆ ಗುರಿಹಿಡಿದು ತುಪಾಕಿ ಹಾರಿಸಿದನು. ಗುಂಡು ಹುಲಿಯ ಕೊರಳಿಗೆ ತಾಕಿ, ಅದು ತತ್ಕ್ಷಣವೇ ಹಾರಿತು. ಹಾರುವಾಗ ಹುಲಿಯು ಆ ಬೇಟೆಗಾರನನ್ನು ನೋಡಿ ಅವನ ಮೈ ಮೇಲೆ ಬಿದ್ದು, ಅವನನ್ನು ತೆಕ್ಕೆ ಹಾಕಿ ಹಿಡಿದು, ಅವನ ಹೊಟ್ಟೆಯನ್ನು ಸೀಳಿತು. ಆ ಕೂಡಲೇ, ಇಬ್ಬರೂ ನಿಶ್ಶೇಷ್ಠ ತರಾಗಿ ನೆಲಕ್ಕೆ ಬಿದ್ದರು. ಆ ಕ್ಷಣವೇ ಅದನ್ನೆಲ್ಲಾ ನೋಡಿದ ಸಿಧ್ಧರು ಮತ್ತು ಹುಡುಗರು ಇವರು ಬಿದ್ದ ಸ್ಥಾನಕ್ಕೆ ಓಡಿ ಬಂದರು. ಮಹಾತ್ಮರು ವ್ಯಾಘ್ರದ ಹತ್ತಿರ ಬಂದು ನೋಡುವಾಗ, ಅದು ಮೆಲ್ಲಗೆ ಮಸ್ತಕವನ್ನು ಎತ್ತಿ ಆತನ

ಪಾದದ ಮೇಲೆ ಇಟ್ಟಿತು. ಹುಲಿಯ ಎರಡೂ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಇದನ್ನು ಸಿದ್ದರು ನೋಡಿ, ಬಹಳ ಅಂತಃಕರಣಯುಕ್ತರಾಗಿ ತಮ್ಮ ಹಸ್ತದಿಂದ ಆ ಮಸ್ತಕವನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡು, ಬಹಳ ದುಃಖದಿಂದ ಅನ್ನುತ್ತಾರೆ - "ಹೇ ನನ್ನ ಪ್ರಿಯಸಖನೇ, ಜೀವದ ಮಿತ್ರನೇ, ಈಗ ನೀನು ಈ ದೇಹವನ್ನು ತ್ಯಜಿಸುವಿ, ಆದರೆ ಮುಂದೆ ನಿನಗೆ ಮನುಷ್ಯ ಜನ್ಮ ಪ್ರಾಪ್ತಿಯಾಗುವದು. ಆ ಸಮಯದಲ್ಲಿ ನೀನು ಯಾವಾಗಲೂ ನನ್ನ ಅಂಗ ಸಂಗದಲ್ಲೇ ಇದ್ದು ಆಡುತ್ತಿರುವಿ, ಈಗ ಶಾಂತನಾಗು". ಈ ಪ್ರಕಾರ ಅಂದು, ಸಿದ್ಧರು ತಮ್ಮ ಹಸ್ತವನ್ನು ಹುಲಿಯ ಮಸ್ತಕದ ಮೇಲೆ ಇಟ್ಟರು. ಕೂಡಲೇ ಆ ವ್ಯಾಘ್ರವು ಅವರ ಚರಣಗಳಲ್ಲಿ ಶಿರವನ್ನು ಇಟ್ಟು ಪ್ರಾಣವನ್ನು ತ್ಯಜಿಸುವಂಥಾದ್ದಾಯಿತು. ವ್ಯಾಘ್ರದ ಈ ಪ್ರಕಾರದ ಪ್ರೇಮವನ್ನು ನೋಡಿದವರಿಗೆಲ್ಲ ನೇತ್ರದಿಂದ ನೀರು ಸುರಿಯುವಂಥಾದ್ದಾಯಿತು. “ಈತನು ಸಾಕ್ಷಾತ್ ಶಿವನೇ ಇರುವನು", ಎಂದು ಮಹಾತ್ಮರ ಪಾದಕ್ಕೆ ಅವರೆಲ್ಲಾ ನಮಸ್ಕಾರ ಮಾಡುವವರಾದರು. ಇತ್ತ ಮೂರ್ಛಾಗತನಾಗಿ

ಬಿದ್ದ ಬೇಟೆಗಾರನು ಕೆಲವು ಹೊತ್ತಿನ ಮೇಲೆ ಎಚ್ಚರವಾದನು. ಆದರೆ ಆತನಿಗೆ ಅಸಕ್ತಿಯಿಂದ ಏಳಲಿಕ್ಕೆ ಆಗಲಿಲ್ಲ. ಹೊಟ್ಟೆಯೊಳಗಿಂದ ಬಹಳ ರಕ್ತ ಹರಿಯುತ್ತಿತ್ತು. ಆಗ್ಗೆ ಸಿದ್ಧರು ಆತನ ಸಮೀಪ ಬಂದು ತಮ್ಮ ಉತ್ತರೀಯ ವಸ್ತ್ರದಿಂದ ಆತನ ಹೊಟ್ಟೆಯನ್ನು ಕಟ್ಟಿ ರಕ್ತಪ್ರವಾಹ ನಿಲ್ಲಿಸಿದರು. ಕೆಲವು ಹುಡುಗರು ಗ್ರಾಮದೊಳಗೆ ಹೋಗಿ, ಜನರನ್ನು ಕರೆದುಕೊಂಡು ಬಂದರು. ಸಿದ್ಧರು ಆ ಜನರನ್ನು ಕುರಿತು ಅನ್ನುತ್ತಾರೆ- ಈತನನ್ನು ಗ್ರಾಮಕ್ಕೆ ಕರೆದುಕೊಂಡು ಹೋಗಿರಿ. ಇವನು ಸಾಯಲಿಕ್ಕಿಲ್ಲ. ಆದರೆ ಆರು ತಿಂಗಳು ತನಕ ಹಾಸಿಗೆ ಹಿಡಿದು ಬೀಳುವನು. ಘಾಯದ ವ್ಯಥೆ ಅಲ್ಲಿತನಕ ಅವನನ್ನು ಬಿಡದು. ಈತನನ್ನು ಜಾಗ್ರತೆಯಿಂದ ರಕ್ಷಿಸಿರಿ.” ಸಿದ್ಧರ ಈ ಮಾತನ್ನು ಕೇಳಿ, ಅವರು ಆಶ್ಚರ್ಯಚಕಿತರಾಗಿ , ಈತನು ಯಾರೋ ಮಹಾತ್ಮನಿದ್ದಾನೆಂತ ತಿಳಿದು, ಸಿದ್ಧರ ವಚನದಂತೆ ನಡೆಸಿದರು. ಹಾಗೆಯೇ ಸಿದ್ಧರು ಮುಂದೆ ಪೃಥ್ವಿ ಸಂಚರಣೆಗೋಸ್ಕರ ತೆರಳುವಂಥವರಾದರು. ಹೇ ಸದ್ಭಕ್ತರುಗಳಿರಾ, ಆ ಪೂರ್ವ ಕಥೆ ಮುಗಿಯಿತು. ಮಹಾತ್ಮರ

ಅಂಗಸ್ಪರ್ಷದ ಮಹಿಮೆಯಿಂದ ಆ ವ್ಯಾಘ್ರರಾಜನು ಮನುಷ್ಯ ಯೋನಿಯನ್ನು ಹೊಂದಿರುವನು. ಆತನೇ ಈ ಜನ್ಮದಲ್ಲಿ ಗುರಪ್ಪನಿದ್ದಾನೆಂದು ನಿಶ್ಚಯವಾಗಿ ತಿಳಿಯುವಂಥವರಾಗಿರಿ. ಪೂರ್ವ ಸಂಸ್ಕಾರದಿಂದ, ಈಗ ಆತನು ಮಹಾತ್ಮರ ಮೈಮೇಲೆ ಆಡುತ್ತಿದ್ದಾನೆ. ಹೇ ಸದ್ಭಕ್ತರುಗಳಿರಾ, ನೀವು ವಿಚಾರಿಸಿದಂಥಾ ಕಥೆಯು ಈ ಪ್ರಕಾರ ಇರುವದು', ಹೀಗೆ ಹೇಳಿ, ಆ ಬಾಲಕನು ಸುಮ್ಮನಾದನು. ಆಗ್ಗೆ ಆ ಅಮಳರಾದ ಸದ್ಭಕ್ತರು, ಅವನನ್ನು ಕುರಿತು ಕೇಳುತ್ತಾರೆ -"ಹೇ ಬಾಳಾ, ನಿನಗೆ ಈ ಕಥೆಯು ಯಾವ ಪ್ರಕಾರ ವಿದಿತವಾಯಿತು ಎಂದು ನಮಗೋಸ್ಕರ ಹೇಳುವಂಥವನಾಗು", ಅಂದದ್ದು

ಕೇಳಿ ಹುಡುಗನನ್ನುತ್ತಾನೆ - "ಕೇಳುವಂಥವರಾಗಿರಿ, ಹೇ ಸದ್ಭಕ್ತರುಗಳಿರಾ, ಶ್ರೀ ಸಿದ್ಧಾರೂಢರ ಕೃಪಾಬಲದಿಂದ, ಈ ಚರಿತ್ರವು ನನ್ನ ಕಣ್ಣ ಮುಂದೆ ನಾನು ನೋಡುತ್ತಲಿದ್ದು, ನನ್ನಿಂದ ತಿಳಿಯಲ್ಪಟ್ಟಿತು". ಈ ಪ್ರಕಾರ ಅಂದು ಆ ಬಾಲಕನು ತೂಷ್ಣಂ ಸ್ಥಿತಿಯನ್ನು ಹೊಂದುವಂಥವನಾದನು. ಅನಂತರ ಸಿದ್ಧಾರೂಢರು ಅವನಿಗೆ ಹಣ್ಣುಗಳನ್ನು ತಿನ್ನಲಿಕ್ಕೆ ಕೊಟ್ಟರು.

ಅವನ್ನು ಆ ಹುಡುಗನು ತಿಂದ ಕೂಡಲೆ, ಎಲ್ಲಾ ಸಂಗತಿಯನ್ನು ಮರೆತು, ಏನೇನು ಅರಿಯದದವನಂತೆ ಯಥಾಪೂರ್ವ ರಸ್ತೆಯ ಮೇಲೆ ಹೋಗಿ, ಆಡಲಾರಂಭಿಸಿದರು. ಆ ಭಕ್ತ ಜನರಾದರೂ ಈ ಪುಣ್ಯ ಚರಿತ್ರವನ್ನು ಕೇಳಿ, ತಾವು ಧನ್ಯ ಧನ್ಯರೆಂದು ಮಹಾತ್ಮರಿಗೂ ಗುರಪ್ಪನಿಗೂ ನಮಸ್ಕರಿಸುವಂಥವರಾದರು.

ಹೇ ಶ್ರೋತಾ ಜನರುಗಳಿರಾ, ಈಗ ಲಕ್ಷ್ಯಾರ್ಥವನ್ನು ಶ್ರವಣ ಮಾಡಿರಿ. ಯಾವದನ್ನು ಸದ್ಗುರುಗಳ ಮುಖದಿಂದ ಶ್ರವಣ ಮಾಡಿದ ಮಾತ್ರದಿಂದ ಪರಮಾರ್ಥವು ಸಿದ್ಧಿಸುತ್ತದೋ ಅದನ್ನೇ ಇಲ್ಲಿ ವಿಚಾರ ಮೂಲಕ ತಿಳಿಯುವಂಥವರಾಗಿರಿ. ಕುರಿಗಳೆಂಬವು ವಿಷಯ ವೃತ್ತಿಗಳು. ಕುರಿ ಕಾಯುವವರೇ ಅಜ್ಞರಾದ ಜೀವರುಗಳು. ವಿಷಯ ವೃತ್ತಿಗಳನ್ನು ಬಿಟ್ಟು ನಿಶ್ಚಿಂತರಾಗಿ ಆಡುತ್ತಿರುವಾಗ್ಗೆ ಸಿದ್ಧನೆಂಬ ವಿವೇಕನು ಅವರಿದ್ದಲ್ಲಿ ಬಂದು, ಅವರ ಕೂಡ ಇರುತ್ತಾನೆ. ಪೂರ್ವದಲ್ಲಿ ಜೀವರುಗಳಿಗೆ ಕ್ರೋಧಾದಿಗಳಿಂದ ಭಯವಿರುತ್ತಿತ್ತು. ಈಗ ವಿವೇಕ ಬಂದ ಮೇಲೆ ಕ್ರೋಧದ ಭೀತಿ ಎಲ್ಲಿಂದ ಬರಬೇಕು? ಒಂದಾನೊಂದು ಕಾಲದಲ್ಲಿ ಮಹಾಕ್ರೂರನಾದ ಕ್ರೋಧನು

ಬರುವಂಥವನಾದನು. ಆಗ್ಗೆ ಎಲ್ಲಾ ವೃತ್ತಿಗಳು ದೂರ ಓಡಿಹೋದವು. ಕೂಡಲೇ ವಿವೇಕನು ಹೋಗಿ ಆ ಕ್ರೋಧವನ್ನು ಆವರಿಸಿಕೊಂಡನು. ಅಂದಿನಿಂದ ಕ್ರೋಧವು ಅವರ ಕೂಡ ಶಾಂತವಾಗಿ ಆಡುತ್ತಿತ್ತು. ಹೀಗಿರುತ್ತಾ ಒಮ್ಮೆ ವೈರಾಗ್ಯವೆಂಬ ಬೇಡನು ಅಕಸ್ಮಾತ್ತಾಗಿ ಬಂದು, ಕ್ರೋಧನನ್ನು ಕೊಂದೇ ಬಿಟ್ಟನು. ಆದರೆ ಆ ಕ್ರೋಧ ವೈರಾಗ್ಯ ಯುದ್ಧದಲ್ಲಿ ವೈರಾಗ್ಯನೂ ಬಹಳ ಸಂಕಷ್ಟಪಟ್ಟನು; ವಿವೇಕನು ವೈರಾಗ್ಯನನ್ನು ಬದುಕಿಸಿ ಆತನನ್ನು ಸಶಕ್ತನಾಗಿ ಮಾಡಿದನು. ಕಾಲಾಂತರದಲ್ಲಿ ವಿವೇಕನು ಸಿದ್ಧಸ್ಥಿತಿ ಹೊಂದಿದನು. ಆ ಕಾಲದಲ್ಲಿ ಕ್ರೋಧನಾದರೂ, ಪುನರ್ಜನ್ಮ ಹೊಂದಿ ದ್ವೈತ ನಿರಾಕರಣವೆಂಬ ನಾಮದಿಂದಿದ್ದಾಗ, ಸಿದ್ಧನು ಆತನನ್ನು ಯಾವಾಗಲೂ ಆಡಿಸುತ್ತಿದ್ದನು. ಈ ಲಕ್ಷ್ಯಾರ್ಥದ ಮನನ ಮಾತ್ರದಿಂದ ದ್ವೈತಭಾವವೆಲ್ಲಾ ನಿರಸನವಾಗಿ ಸದ್ಗುರು ಕೃಪೆಯಿಂದ ಪೂರ್ಣಾತ್ಮನು ಹೃದಯದಲ್ಲಿ ಪ್ರಕಟನಾಗುವನು. ಮುಂದಿನ ಅಧ್ಯಾಯದಲ್ಲಿ ಅಮೃತಕ್ಕಿಂತ ಅಧಿಕ ಮಧುರವಾದ ಕಥೆಯು ಇರುವುದು. ಅದನ್ನು ಶ್ರವಣ ಮಾಡಿದ ಮಾತ್ರದಿಂದ

ಷಡ್ರಿಪುಗಳಿಗೆ ಸಹಜವಾಗಿ ನಾಶ ಪ್ರಾಪ್ತವಾಗುವದು.

ಎಂಬಲ್ಲಿಗೆ  ಶ್ರೀ ಸಿದ್ಧಾರೂಢ ಕಥಾಮೃತದೊಳ್

ಶ್ರವಣಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮಮಾಡುವಂತಾ

ಅತಿ ಮಧುರವಾದ ಈ ಹದಿನೆಂಟನೇ ಅಧ್ಯಾಯವನ್ನು

ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ

ಚರಣಾರವಿಂದಗಳಿಗೆ ಅರ್ಪಿಸುವನು.